## 24. ಕುವೆಂಪು ಶತಮಾನೋತ್ಸವ ಸರ್ಕಾರಿ ಮಾದರಿ ಹಿ ಪ್ರಾ ಶಾಲೆ, ಮಾಳೂರು, ಗುಣಾತ್ಮಕ ಶಿಕ್ಷಣಕ್ಕೆ ತಂತ್ರಜ್ಞಾನ ಸ್ಪರ್ಶ ನೀಡಿದ ಕೊಡುಗೈ ದಾನಿಗಳು

ನಮ್ಮ ಕುವೆಂಪು ಶತಮಾನೋತ್ಸವ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆ, ಮಾಳೂರು, ತೀರ್ಥಹಳ್ಳಿ ತಾ, ಶಿವಮೊಗ್ಗ ಜಿಲ್ಲೆ ಇಲ್ಲಿ ಸುಮಾರು 230 ವಿದ್ಯಾರ್ಥಿಗಳು ಅಭ್ಯಾಸ ಮಾಡುತ್ತಿದ್ದು, ಈಗಿನ ದಿನಮಾನಗಳಲ್ಲಿ ಸರ್ಕಾರಿ ಶಾಲೆಗಳಿಗೆ ಮಕ್ಕಳನ್ನು ಸೇರಿಸಲು ಹಿಂಜರಿಯುವಾಗ ಯಾವುದೇ ಖಾಸಗಿ ಶಾಲೆಗೆ ಕಡಿಮೆಯಿಲ್ಲದ ರೀತಿಯಲ್ಲಿ ವಿದ್ಯಾಭ್ಯಾಸ ಮಾಡಲು, ಪಠ್ಯ ವಿಷಯಗಳನ್ನು ಸ್ಲೈಡ್ ಶೋ ಮೂಲಕ ಬೋಧಿಸಲು ಮತ್ತು ಸರಳ ಸುಲಭವಾಗಿ ಪ್ರಾಯೋಗಿಕವಾಗಿ ಕಂಪ್ಯೂಟರ್ ಶಿಕ್ಷಣ ಪಡೆಯಲು ಅನುಕೂಲ ಕಲ್ಪಿಸಲು ಮಾಳೂರಿನ ಪಕ್ಕದ ಗ್ರಾಮವಾದ ಈರೇಗೋಡಿನ ಶ್ರೀಮತಿ ಕಮಲಮ್ಮ ಮತ್ತು ಶ್ರೀ ಇ.ಎಸ್.ವೆಂಕಟಪ್ಪನಾಯ್ಕರವರ ಸ್ಮರಣಾರ್ಥವಾಗಿ ಶ್ರೀಮತಿ ಅನುಪಮ ಮತ್ತು ಶ್ರೀ ಇ.ವಿ. ಲಕ್ಷ್ಮಿನಾರಾಯಣರವರು ಉದ್ಯಮಿಗಳು ದುಬೈ ಇವರು ಸುಮಾರು 3,50,000/- ಮೊತ್ತದ ಹತ್ತು ಲ್ಯಾಪ್ ಟಾಪ್‌ಗಳನ್ನು ನೀಡಿ ಮಕ್ಕಳ ಶೈಕ್ಷಣಿಕ ಅಭಿವೃದ್ಧಿಗೆ ಸಹಾಯಹಸ್ತ ಚಾಚಿರುತ್ತಾರೆ. ಶ್ರೀಯುತರನ್ನು ಕ್ಷೇತ್ರದ ಶಾಸಕರಾದ ಶ್ರೀ ಕಿಮ್ಮನೆ ರತ್ನಾಕರ, ಶಿಕ್ಷಣ ಇಲಾಖೆ, ನಮ್ಮ ಶಾಲೆಯ ಎಸ್.ಡಿ.ಎಂ.ಸಿ., ಶಿಕ್ಷಕ ವೃಂದ, ಪೋಷಕ ವೃಂದದ ವತಿಯಿಂದ ಸನ್ಮಾನಿಸಿ ಅಭಿನಂದಿಸಲಾಯಿತು. ಸದರಿ ಲ್ಯಾಪ್‌ಟಾಪ್‌ಗಳನ್ನು ಸದುಪಯೋಗ ಪಡಿಸಿಕೊಳ್ಳಲಾಗುತ್ತಿದೆ.

### ಶಾಲಾ ಸಮಗ್ರ ಅಭಿವೃದ್ಧಿಗೆ ದಾನಿಗಳಿಂದ ಸೌಲಭ್ಯಗಳ ಮಹಾಪೂರ

ಶ್ರೀಯುತ ಸತ್ಯಣ್ಣ ಮತ್ತು ಮಕ್ಕಳು ಹಿರೇಬೈಲು, ಇವರು ಶಾಲೆಗೆ ಅಂದಾಜು ರೂ 30,000 ಮೊತ್ತದ ಯು.ಪಿ.ಎಸ್. ಬ್ಯಾಟರಿ ವ್ಯವಸ್ಥೆಯನ್ನು ಕೊಡುಗೆಯಾಗಿ ನೀಡಿರುತ್ತಾರೆ. ಶಾಲೆಯ ಹಳೆಯ ವಿದ್ಯಾರ್ಥಿ ಹಾಗು ವಿಜಯಬ್ಯಾಂಕ್ ಬೆಜ್ಜವಳ್ಳಿ ಶಾಖೆಯ ವ್ಯವಸ್ಥಾಪಕರಾದ ಶ್ರೀ ವಿಶ್ವನಾಥ್ ಇವರು ತಮ್ಮ ಬ್ಯಾಂಕ್ ವತಿಯಿಂದ ಅಂದಾಜು ರೂ 22,500 ಮೊತ್ತದಲ್ಲಿ ಮಕ್ಕಳಿಗೆ Hand Wash Basin System ವ್ಯವಸ್ಥೆಯನ್ನು ನಿರ್ಮಿಸಿಕೊಟ್ಟಿರುತ್ತಾರೆ. ಶ್ರೀಮತಿ ಪಾರ್ವತಮ್ಮ ಶ್ರೀ ಪುಟ್ಟಸ್ವಾಮಿ ಗೌಡರು ದಾರದಹಳ್ಳಿ ಮೂಡಿಗೆರೆ ತಾಲ್ಲೂಕು ಇವರು ಅಂದಾಜು ರೂ 6000/- ಮೊತ್ತದ ಕಬ್ಬಿಣದ ಅಲ್ಮೇರಾವನ್ನು ಕೊಡುಗೆಯಾಗಿ ನೀಡಿದ್ದಾರೆ. ಶ್ರೀಯುತ ಸತ್ಯನಾರಾಯಣ ಎಸ್.ಎನ್. ಸಾಲೇಜನಗಲ್ ಮಾಳೂರು ಇವರು, ಪ್ರಸ್ತುತ ಶೈಕ್ಷಣಿಕ ಸಾಲಿನಲ್ಲಿ ಶಾಲಾ ಅಡಿಕೆ ತೋಟ ನಿರ್ಮಿಸುವ ಸಲುವಾಗಿ ಅಂದಾಜು ರೂ 3000 ಮೊತ್ತದ 150 ಉತ್ತಮ ಗುಣಮಟ್ಟದ ಅಡಿಕೆ ಸಸಿಗಳನ್ನು ಕೊಡುಗೆಯಾಗಿ ನೀಡಿರುತ್ತಾರೆ.

ಗ್ರಾಮಪಂಚಾಯತಿ ಕಾರ್ಯಾಲಯ ಬೆಜ್ಜವಳ್ಳಿ ಇವರು ರೂ 12000 ಅನುದಾನ ನೀಡಿದ್ದು ಇದರಿಂದ ಶಾಲಾ ಕಟ್ಟಡಕ್ಕೆ ಪೈಂಟಿಂಗ್ ಕಾರ್ಯ ಮಾಡಿದ್ದು, ಅಂದವಾಗಿ ಕಂಗೊಳಿಸುತ್ತಿರುವ ಕಟ್ಟಡ. "ಹಸಿರು ಶಾಲೆ" ಹ್ಯಾಟ್ರಿಕ್ ಪ್ರಶಸ್ತಿ ಪಡೆದು "ಪರಿಸರ ಮಿತ್ರ ಶಾಲೆ"ಗೆ ಸಜ್ಜಾದ ನಮ್ಮ ಹೆಮ್ಮೆಯ ಶಾಲೆ.

ನಮ್ಮ ಕು.ಶ.ಸ.ಮಾ.ಹಿ.ಪ್ರಾ. ಶಾಲೆ ಮಾಳೂರು, ತೀರ್ಥಹಳ್ಳಿ, ಶಿವಮೊಗ್ಗ. ಈ ಶಾಲೆಯು ವಿದ್ಯಾರ್ಥಿಗಳಿಗೆ ನಿರಂತರವಾಗಿ ಗುಣಾತ್ಮಕ ಶಿಕ್ಷಣವನ್ನು ನೀಡುವುದರ ಜೊತೆಗೆ ಕ್ರೀಡಕೂಟ, ಪ್ರತಿಭಾ ಕಾರಂಜಿ ಸ್ಪರ್ಧೆಗಳಲ್ಲಿ ಮುಂಚೂಣಿಯನ್ನು ಹೊಂದಿದೆ. ಇದರ ಜೊತೆಗೆ ನಮ್ಮ ಶಾಲೆಯ ಮುಂಭಾಗದಲ್ಲಿ ಶಾಲಾ ಕೈ ತೋಟ, ಆವರಣದೊಳಗೆ ಸುಂದರವಾದ ಕೈ ತೋಟ, ಶಾಲೆಯ ಪಕ್ಕದಲ್ಲಿ ಔಷಧಿ ವನ ಮತ್ತು ಶಾಲೆಯ ಕೈ ತೋಟದೊಳಗೆ ವಿಶ್ರಾಂತಿ ಸಮಯದಲ್ಲಿ ಕುಳಿತು ಓದಲು "ಗುರುಕುಲ ಮಾದರಿಯ" ಕುಟೀರಗಳನ್ನು ನಿರ್ಮಾಣ ಮಾಡಿ ಮಕ್ಕಳ ಕಲಿಕೆಗೆ ಸಹಾಯವಾಗಿವೆ. ಶಾಲೆಯ ಆವರಣದ ಪಕ್ಕದಲ್ಲಿ ಶಾಲೆಯ ಎಸ್.ಡಿ.ಎಂ.ಸಿ ದಾನಿಗಳು, ಶಿಕ್ಷಕರು ಮತ್ತು ಮಕ್ಕಳಿಂದ 20 ಗುಂಟೆ ಜಾಗದಲ್ಲಿ ಅಡಿಕೆ ಸಸಿಗಳನ್ನು ನೆಟ್ಟು ಪೋಷಿಸಲಾಗುತ್ತದೆ. ತರಕಾರಿಗಳನ್ನು ಬೆಳೆಸಲಾಗದಿದೆ.

2014-15 ರಿಂದ ನಿರಂತರವಾಗಿ 2016-17 ವರೆಗೆ 3 ಬಾರಿ ಸಂತೆ ಕಡೂರಿನ ಪರಿಸರ ಅಧ್ಯಯನ ಕೇಂದ್ರ ನೀಡುವ ಹಸಿರು ಶಾಲೆ ಪ್ರಶಸ್ತಿಗೆ ಭಾಜನವಾಗಿ ಪ್ರಸಕ್ತಸಾಲಿನಲ್ಲಿ ಪರಿಸರ ಮಿತ್ರ ಶಾಲೆ ಪ್ರಶಸ್ತಿಗೆ ಸಜ್ಜುಗೊಳ್ಳುತ್ತಿದ್ದೇವೆ. ಒಟ್ಟಾರೆಯಾಗಿ ನಮ್ಮ ಶಾಲೆಯು ಭೌತಿಕವಾಗಿ ಮತ್ತು ಬೌದ್ಧಿಕವಾಗಿ ಅತ್ಯುತ್ತಮ ಶಾಲೆಯಾಗಿ ಖಾಸಗಿ ಶಾಲೆಗಳಿಗೆ ಪೈಪೋಟಿ ನೀಡುತ್ತಿದೆ.

ನಮ್ಮ ಕು.ಶ.ಸ.ಮಾ.ಹಿ. ಪ್ರಾ.ಶಾಲೆ. ಮಾಳೂರು ತೀರ್ಥಹಳ್ಳಿ ಶಿವಮೊಗ್ಗ. ಈ ಶಾಲೆಯು ಕುವೆಂಪುರವರ ಜನ್ಮ ಶತಮಾನೋತ್ಸವದ ನೆನಪಿಗೆ ನಿರ್ಮಿಸಿದ ಜಿಲ್ಲೆಯ ಏಕೈಕ ಶಾಲೆಯಾಗಿದೆ. ಇದು "ಕುಪ್ಪಳಿಯ ಕವಿಮನೆ" ಹೋಲುವಂತಿದೆ. ಶಾಲೆಯ ಮುಂಭಾಗದ ಗೇಟ್‌ನಲ್ಲಿ ಆಗಮಿಸುವಾಗ ಕಾಂಪೌಂಡಿನ ಗೋಡೆಯ ಮೇಲಿನ

ಸುಂದರವಾಗಿ ಮೂಡಿಬಂದ ಯಕ್ಷಗಾನದ ಚಿತ್ರಗಳು ಸ್ವಾಗತ ಕೋರುವಂತೆ ಗೋಚರಿಸುತ್ತವೆ. ನಂತರ ಶಾಲೆಯ ಕಾರಿಡಾರ್‌ನ ಗೋಡೆಗಳ ಮೇಲೆ ಮಲೆನಾಡಿನ ಸಾಂಸ್ಕೃತಿಕ ಗತವೈಭವವನ್ನು ನೆನಪಿಸುವ ಹಸೆ ಚಿತ್ರಗಳು ತುಂಬಾ ಅತ್ಯದ್ಭುತವಾಗಿ ಮೂಡಿ ಬಂದಿವೆ. ಇವುಗಳ ಮೇಲೆ ನಮ್ಮ ಕನ್ನಡ ನಾಡಿನ ಐತಿಹಾಸಿಕ ಸ್ಮಾರಕಗಳು, ಜನಪದ ನೃತ್ಯಗಳು, ಜ್ಞಾನಪೀಠ ಪ್ರಶಸ್ತಿ ವಿಜೇತ ಕವಿಗಳ ಭಾವ ಚಿತ್ರಗಳು ನೋಡುಗರನ್ನು ಮೂಕ ವಿಸ್ಮಿತರನ್ನಾಗಿಸಿದೆ. ಅಲ್ಲದೆ ಮಕ್ಕಳಿಗೆ ಚಿತ್ರಕಲಾ ಶಿಕ್ಷಣ ಪಡೆಯುವಂತೆ ಕುತೂಹಲಿಗಳನ್ನಾಗಿ ಮೂಡಿದೆ. ಅಲ್ಲದೆ ನಲಿಕಲಿ ತರಗತಿ ಕೊಠಡಿಯೊಳಗಿನ ಗೋಡೆಗಳ ಮೇಲೆ ಪಠ್ಯಕ್ಕೆ ಪೂರಕವಾದ ಅಂಶಗಳನ್ನು ಚಿತ್ರವಾಗಿಸಿ ಮಕ್ಕಳ ಸ್ಮೃತಿ ಪಟಲದಲ್ಲಿ ಶಾಶ್ವತವಾಗಿ ಉಳಿಯುವಂತೆ ಮಾಡಲಾಗಿದೆ. ಈ ಕಲೆ ಕುಂಚವಾಗಿದ್ದು ನಮ್ಮ ಶಾಲೆಯ ಚಿತ್ರಕಲಾ ಶಿಕ್ಷಕರಾದ ಶ್ರೀ ಜಗದೀಶ್ ಶೀಲವಂತರವರಿಂದ. ಇವರು ನಮ್ಮ ಶಾಲೆಯ ಚಿತ್ರಕಲಾ ಶಿಕ್ಷಕರಾಗಿರುವುದರ ಜೊತೆಗೆ ಇನ್‌ಸ್ಪೈರ್ ಅವಾರ್ಡ್ ನಂತಹ ವಿಜ್ಞಾನ ಸ್ಪರ್ಧೆಗಳಲ್ಲಿ ತಮ್ಮ ಮಾರ್ಗದರ್ಶನ ನೀಡಿ ರಾಷ್ಟ್ರಮಟ್ಟದ ಸ್ಪರ್ಧೆಗಳಿಗೆ ಮಕ್ಕಳನ್ನು ಕರೆದೊಯ್ದಿದ್ದಾರೆ. ಕಲಿಕೆಯಲ್ಲಿಯೂ ಯಾವ ವಿಷಯದಲ್ಲಿಯೂ ಮಕ್ಕಳು ಹಿಂದುಳಿಯದಿರುವುದೇ ನಮ್ಮ ಸಾಧನೆ. ಇಂಥಹ ನಮ್ಮ ಹೆಮ್ಮೆಯ ಶಿಕ್ಷಕರು ನಮ್ಮ ಶಾಲೆಗೆ ಕೀರ್ತಿ ತಂದಿರುತ್ತಾರೆ.
















